# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.938/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 17.8.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ತಾಲ್ಲೂಕುಗಳಲ್ಲಿ ಸಿ.ಎಲ್.2 ಲೈಸೆನ್ಸ್ ಹೊಂದಿ ನಡೆಸುತ್ತಿರುವ ಬಾರ್‌ಗಳಲ್ಲಿ ಷರತ್ತುಗಳನ್ನು ಉಲ್ಲಂಘಿಸಿ ಚಿಲ್ಲರೆ ಮಧ್ಯ ಮಾರಾಟ ಮಾಡುತ್ತಿರುವುದನ್ನು ತಡೆಗಟ್ಟುವುದು, ಸಿ.ಎಲ್.2 ಮತ್ತು ಸಿಎಲ್-9 ಬಾರ್‌ಗಳು ವಸತಿ ಪ್ರದೇಶದಲ್ಲಿ, ಹರಿಜನ-ಗಿರಿಜನ ಕಾಲೋನಿಗಳಲ್ಲಿ ನಡೆಯುತ್ತಿದ್ದರೆ ಅವುಗಳನ್ನು ಬೇರೆ ಕಡೆ ಸ್ಥಳಾಂತರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸುವ ಬಗ್ಗೆ.

*******

ಶ್ರೀ. ಕನ್ನಡಾಂಬೆ ರಾಮಮೂರ್ತಿ, ಮಾಗಡಿ ಮುಖ್ಯರಸ್ತೆಯ ನಿವಾಸಿ, ಬೆಂಗಳೂರು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ.ಗಂಗಯ್ಯ, ಅಬಕಾರಿ ನಿರೀಕ್ಷಕರು, (2) ಶ್ರೀ ಶಿವಕುಮಾರ್, ಅಬಕಾರಿ ನಿರೀಕ್ಷಕರು, ಹೊಸಕೋಟೆ ವಲಯ, (3) ಶ್ರೀ ಸಿದ್ದಗಂಗಪ್ಪ, ಅಬಕಾರಿ ನಿರೀಕ್ಷಕರು, ದೊಡ್ಡಬಳ್ಳಾಪುರ ವಲಯ ಮತ್ತು (4) ಶ್ರೀ ತ್ರಿನೇತ್ರಿ, ಅಬಕಾರಿ ನಿರೀಕ್ಷಕರು, ದೇವನಹಳ್ಳಿ ವಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, ನೆಲಮಂಗಲ, ಹೊಸಕೋಟೆ, ದೇವನಹಳ್ಳಿ ತಾಲ್ಲೂಕುಗಳಲ್ಲಿ ವಲಯ 4ರ ವ್ಯಾಪ್ತಿಯಲ್ಲಿರುವ ಸಿ.ಎಲ್.2 ಮತ್ತು ಸಿ.ಎಲ್.9 ಗಳಲ್ಲಿ ಭಾರೀ ಅಕ್ರಮ ನಡೆದಿರುತ್ತದೆ. ಸಿ.ಎಲ್.2 ಬಾರ್‌ಗಳಲ್ಲಿ

ಚಿಲ್ಲರೆ ಮದ್ಯವನ್ನು ನೀಡಬಾರದೆಂದು ಅಬಕಾರಿ ಕಾನೂನಿದ್ದರೂ ಸಹಾ ಚಿಲ್ಲರೆ ಮದ್ಯವನ್ನು ಯಥೇಚ್ಛವಾಗಿ ಮಾರಾಟ ಮಾಡುತ್ತಿದ್ದಾರೆ. ಸಿ.ಎಲ್.2 ಮತ್ತು ಸಿ.ಎಲ್.9 ಬಾರ್ ಗಳನ್ನು ವಸತಿ ಪ್ರದೇಶದಲ್ಲಿ ನಡೆಸುತ್ತಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ಇಂತಹ ಬಾರ್‌ಗಳನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಹಾಗೂ ಅಕ್ರಮವನ್ನು ನಿಲ್ಲಿಸುವಂತೆ ಎದುರುದಾರರಿಗೆ ಮನವಿ ಮಾಡಿಕೊಂಡರೂ ಸಹಾ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಅಬಕಾರಿ ಅಕ್ರಮಗಳು ನಡೆಯದಂತೆ ಎಚ್ಚರ ವಹಿಸಿ ಷರತ್ತುಗಳು ಉಲ್ಲಂಘನೆಯಾಗದಂತೆ ನೋಡಿಕೊಂಡಿದ್ದು ಇರುತ್ತದೆ. ಷರತ್ತು ಉಲ್ಲಂಘನೆಗಳು ಕಂಡುಬಂದಂತಹ ಸಂದರ್ಭದಲ್ಲಿ ಅಂತಹ ಬಾರ್‌ಗಳ ವಿರುದ್ದ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗಿರುತ್ತದೆ. ದೂರಿನಲ್ಲಿ ಆಪಾದಿಸಿರುವಂತೆ ವಸತಿ ಪ್ರದೇಶದಲ್ಲಿ, ಹರಿಜನ, ಗಿರಿಜನ ಪ್ರದೇಶದಲ್ಲಿ ಈ ರೀತಿ ಯಾವುದೇ ಸಿ.ಎಲ್.2 ಅಥವಾ ಸಿ.ಎಲ್.9 ಬಾರ್‌ಗಳು ಇರುವುದಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅಬಕಾರಿ ಲೈಸೆನ್ಸ್‌ನಲ್ಲಿಯ ಷರತ್ತುಗಳನ್ನು ಉಲ್ಲಂಘಿಸಿದ ಬಾರ್‌ಗಳ ವಿರುದ್ದ 2013–14ನೇ ಸಾಲಿನಲ್ಲಿ 47 ಪ್ರಕರಣಗಳನ್ನು ದಾಖಲಿಸಿ 8 ಲಕ್ಷ ರೂ.ಗಳ ದಂಡವನ್ನು ವಸೂಲಿ ಮಾಡಲಾಗಿರುತ್ತದೆ. 2014–15ನೇ ಸಾಲಿನಲ್ಲಿ 46 ಪ್ರಕರಣಗಳನ್ನು ದಾಖಲಿಸಿ, ರೂ.5,37,000/–ಗಳ ದಂಡ ವಸೂಲು ಮಾಡಲಾಗಿರುತ್ತದೆ. ಆದ್ದರಿಂದ ತಾವು ಯಾವುದೇ ಅಕ್ರಮ ನಡೆಯಲು ಅವಕಾಶವಿಲ್ಲದಂತೆ ಕರ್ತವ್ಯನಿರ್ವಹಿಸಿದ್ದು, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರ ಪ್ರತ್ಯುತ್ತರವಿಲ್ಲವೆಂದು ಪರಿಗಣಿಸಲಾಗಿದೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ,

ದೂರುದಾರರು ಯಾವುದೇ ನಿರ್ದಿಷ್ಟ ಸಿ.ಎಲ್.2, ಸಿ.ಎಲ್.9 ಲೈಸೆನ್ಸ್ ಹೊಂದಿದ ಬಾರ್‌ಗಳ ವಿರುದ್ಧ ಕ್ರಮಕೈಗೊಂಡಿರುವುದಿಲ್ಲವೆಂದು ಆಪಾದಿಸಿರುವುದಿಲ್ಲ. ಆದರೆ ಇಡೀ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಿ.ಎಲ್.2 ಮತ್ತು 9 ಲೈಸೆನ್ಸ್ ಗಳ ಷರತ್ತುಗಳನ್ನು ಉಲ್ಲಂಘಿಸಿ ಬಾರ್ ನಡೆಸುತ್ತಿದ್ದರೂ ಸಹಾ ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ಆಪಾದಿಸಿರುತ್ತಾರೆ. ಅಲ್ಲದೆ, ಇಂತಹ ಬಾರ್‌ಗಳನ್ನು ಕೆಲವು ಸ್ಥಳಗಳಲ್ಲಿ ವಸತಿ ಪ್ರದೇಶದಲ್ಲಿ, ಹರಿಜನ–ಗಿರಿಜನ ಕಾಲೋನಿಗಳಲ್ಲಿ ಸ್ಥಾಪಿಸಿರುತ್ತಾರೆಂದು ಆಪಾದಿಸಿರುತ್ತಾರೆ. ಈ ಬಗ್ಗೆ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

6. ಎದುರುದಾರರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸ್ಥಾಪಿತವಾದ ಸಿಎಲ್.2 ಮತ್ತು 9 ಲೈಸೆನ್ಸ್ ಹೊಂದಿರುವ ಅಂಗಡಿಗಳು ಷರತ್ತುಗಳನ್ನು ಉಲ್ಲಂಘಿಸಿದಾಗ ಅವುಗಳ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಸೂಲು ಮಾಡಿದ ಬಗ್ಗೆ ರಸೀದಿಗಳನ್ನು ಹಾಜರುಪಡಿಸಿರುತ್ತಾರೆ. ಎದುರುದಾರರ ಪ್ರಕಾರ ಈ ಎಲ್ಲಾ ಬಾರ್‌ಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಲಕ್ಷಾಂತರ ರೂಪಾಯಿಗಳ ದಂಡವನ್ನು ವಸೂಲುಮಾಡಿದ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಆದರೆ, ಎದುರುದಾರರು ಕ್ರಮಕೈಗೊಂಡಿದ್ದು, ತೃಪ್ತಿಕರವೆಂದು ಕಂಡುಬರುವುದಿಲ್ಲ. ಎದುರುದಾರರು ತಮ್ಮ ಕರ್ತವ್ಯದ ಅವಧಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದು, ಕಂಡುಬಂದಿದ್ದು, ಆದರೆ ಪೂರ್ಣ ಪ್ರಮಾಣದಲ್ಲಿ ಅಕ್ರಮವನ್ನು ತಡೆಗಟ್ಟಲು ಸಾಧ್ಯವಾಗಿರುವುದಿಲ್ಲ. ಎದುರುದಾರರು ಕೆಲವು ಅಂಗಡಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ದಂಡ ವಸೂಲು ಮಾಡಿರುವುದರಿಂದ, ಅವರ ವಿರುದ್ಧ ಆಪಾದಿಸಿರುವ ಅಂಶಗಳು ದೃಡಪಟ್ಟಿರುವುದಿಲ್ಲ.

7. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಪ ಅಬಕಾರಿ ಆಯುಕ್ತರು, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳ ವ್ಯಾಪ್ತಿಯ ಸಿಎಲ್ 2 ಮತ್ತು ಸಿಎಲ್ 9 ಲೈಸೆನ್ಸ್ ಹೊಂದಿದ ಎಷ್ಟು ಅಂಗಡಿಗಳು ವಸತಿ ಪ್ರದೇಶದಲ್ಲಿ ಸ್ಥಾಪಿತವಾಗಿವೆ

ಹಾಗೂ ಎಷ್ಟು ಅಂಗಡಿಗಳು ಲೈಸೆನ್ಸ್‌ನ್ನು ಉಲ್ಲಂಘಿಸಿವೆ ಮತ್ತು ಅವುಗಳ ವಿರುದ್ಧ ಕೈಗೊಂಡ ಕ್ರಮಗಳೇನು ಎಂಬ ಬಗ್ಗೆ ವರದಿ ಸಲ್ಲಿಸಿರುತ್ತಾರೆ.

8. ಈ ವರದಿಯನ್ನು ಪರಿಶೀಲಿಸಿದಾಗ, ಸಿಎಲ್ 2 ಸನ್ನದುಗಳ ಸಂಖ್ಯೆ ಹಾಗೂ ಅವುಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರ ಸಂ. | ತಾಲ್ಲೂಕು | ಸಿಎಲ್ 2 ಸನ್ನದು ಅಂಗಡಿಗಳ ಸಂಖ್ಯೆ | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|
| 1 | ನೆಲಮಂಗಲ | 14 | 07 |
| 2 | ದೊಡ್ಡಬಳ್ಳಾಪುರ | 20 | 25 |
| 3 | ದೇವನಹಳ್ಳಿ | 17 | 22 |
| 4 | ಹೊಸಕೋಟೆ | 13 | 07 |
| ಒಟ್ಟು | | 64 | 61 |

ನೆಲಮಂಗಲ ವಲಯ ವ್ಯಾಪ್ತಿಯಲ್ಲಿ 14–ಸಿಎಲ್ 9 ಸನ್ನದು ಹೊಂದಿದ ಅಂಗಡಿಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳು ಯಾವುವೂ ವಸತಿ ಪ್ರದೇಶದಲ್ಲಿರುವುದಿಲ್ಲ. ಹೊಸಕೋಟೆ ವಲಯ ವ್ಯಾಪ್ತಿಯಲ್ಲಿ 11– ಸಿಎಲ್ 9 ಸನ್ನದು ಹೊಂದಿದ ಅಂಗಡಿಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳು ಯಾವುವೂ ವಸತಿ ಪ್ರದೇಶದಲ್ಲಿರುವುದಿಲ್ಲ. ದೇವನಹಳ್ಳಿ ವಲಯ ವ್ಯಾಪ್ತಿಯಲ್ಲಿ ಸಿಎಲ್ 9 ಸನ್ನದು ಹೊಂದಿದ ಅಂಗಡಿಗಳು ವಸತಿ ಪ್ರದೇಶದಲ್ಲಿರುವುದಿಲ್ಲ. ಅದೇರೀತಿ ದೊಡ್ಡಬಳ್ಳಾಪುರ ವಲಯ ವ್ಯಾಪ್ತಿಯಲ್ಲಿ 18 ಸಿ ಎಲ್ 9 ಸನ್ನದು ಹೊಂದಿದ ಅಂಗಡಿಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳು ಯಾವುವೂ ವಸತಿ ಪ್ರದೇಶದಲ್ಲಿರುವುದಿಲ್ಲ.

9. ಈ ರೀತಿ ಅಬಕಾರಿ ಉಪ ಆಯುಕ್ತರು ವರದಿ ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಅಬಕಾರಿ ಲೈಸೆನ್ಸ ಉಲ್ಲಂಘಿಸಿದ ಸಂದರ್ಭದಲ್ಲಿ ಅನೇಕ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ. ಅನೇಕ ಲೈಸೆನ್ಸ್ ಹೊಂದಿದ ಅಂಗಡಿಗಳಿಂದ ದಂಡವನ್ನು ಸಹಾ ವಸೂಲು ಮಾಡಿರುತ್ತಾರೆ. ಇದರಲ್ಲಿ ಎದುರುದಾರರ ಕರ್ತವ್ಯಲೋಪ ಕಂಡುಬರುವುದಿಲ್ಲ. ಆದಾಗ್ಯೂ ಅನಧಿಕೃತ ಬಾರ್‌ಗಳ ವಿರುದ್ಧ ಕ್ರಮಕೈಗೊಳ್ಳುವುದು ಅವಶ್ಯಕವಾಗಿರುತ್ತದೆ.

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ.12(1)ರಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಈ ತಾಲ್ಲೂಕುಗಳಲ್ಲಿ ಸಿ.ಎಲ್.2 ಮತ್ತು ಸಿಎಲ್.9 ಲೈಸೆನ್ಸ್ ಹೊಂದಿ ನಡೆಸುತ್ತಿರುವ ಬಾರ್‌ಗಳಲ್ಲಿ ಷರತ್ತುಗಳನ್ನು ಉಲ್ಲಂಘಿಸಿ ಸಿ.ಎಲ್.2 ಬಾರ್‌ನವರು ಚಿಲ್ಲರೆ ಮದ್ಯ ಮಾರಾಟ ಮಾಡುತ್ತಿರುವುದನ್ನು ತಡೆಗಟ್ಟುವುದು, ಸಿ.ಎಲ್.2 ಮತ್ತು ಸಿಎಲ್–9 ಬಾರ್‌ಗಳು ವಸತಿ ಪ್ರದೇಶದಲ್ಲಿ, ಹರಿಜನ–ಗಿರಿಜನ ಕಾಲೋನಿಗಳಲ್ಲಿ ನಡೆಯುತ್ತಿದ್ದರೆ ಅವುಗಳನ್ನು ಬೇರೆ ಕಡೆ ಸ್ಥಳಾಂತರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ವರದಿ ಸಲ್ಲಿಸಲು ಕೋರಲಾಗಿದೆ.

17/8/17.

**(ನ್ಯಾಯಮೂರ್ತಿ ಸುಭಾಷ್ ಬಿ ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

17/8